ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

**S.C. No. 218/2025**

| ಸಾಕ್ಷಿಯ ಹೆಸರು | ಶ್ರೀ. ರಾಕೇಶ್ @ ಕಿರಣ್ | ಚಾಸಾಃ | ಫ್ರಾಸಾಃ |
|---|---|---|---|
| ತಂದೆಯ ಹೆಸರು | ಅಪ್ಪಾಜಿ | 2 | 2 |
| ವಯಸ್ಸು | 28 ವರ್ಷ | ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು. ದಿನಾಂಕ **01.06.2026.** | |
| ಉದ್ಯೋಗ | ಚಾಲಕ | | |
| ವಾಸ ಸ್ಥಳ | ಅಗಲಕುಪ್ಪೆ | | |

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

ಆರೋಪಿ ಮತ್ತು ಚಾಸಾ. 1 ಗೊತ್ತು. ದಿನಾಂಕ 23.02.2025 ರಂದು ರಾತ್ರಿ 12.0 ಕ್ಕೆ ಆರೋಪಿ ಮತ್ತು ನನ್ನ ನಡುವೆ ಬಾಯಿ ಮಾತಿನ ಜಗಳವಾಗುತ್ತಿತ್ತು. ಆಗ ಚಾಸಾ. 1 ರವರ ತಂದೆ ಹೊರಗಡೆ ನಿಂತಿದ್ದು, ಚಾಸಾ. 1 ರವರು ಕಲ್ಲು ಎಡವಿ ಕೆಳಗೆ ಬಿದಿದ್ದರಿಂದ ಬಲ ಕೈನ ಮೂಳೆ ಮುರಿದುಹೋಯಿತು. ನಂತರ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿದರು. ಪೊಲೀಸರು ನನ್ನ ಹೇಳಿಕೆ ಪಡೆದಿಲ್ಲ.

(ಈ ಸಾಕ್ಷಿಯನ್ನು ಅಭಿಯೋಜಕರು ಪ್ರತಿ ಕೂಲ ಸಾಕ್ಷಿ ಅಂತ ಪರಿಗಣಿಸಲು ಅನುಮತಿ ಕೇಳಿದ್ದು ಸಾಕ್ಷಿಯು ನೀಡಿದ್ದ ವ್ಯತಿರಿಕ್ತ ಹೇಳಿಕೆಯನ್ನು ಗಣನೆಗೆ ತೆಗೆದುಕೊಂಡು ಅನುಮತಿ ನೀಡಲಾಗಿದೆ)

ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ

ದಿನಾಂಕ 23.02.2025 ರಂದು ರಾತ್ರಿ ಸುಮಾರು 12:15 ಗಂಟೆ ಸಮಯದಲ್ಲಿ ನಾನು, ಧನುಷ್, ರವಿ ಕಿರಣ್ ನಾಗೇಶ್ ರವರ ಮನೆಯ ಮುಂಭಾಗದಲ್ಲಿ, ಜೋರಾಗಿ ಮಾತನಾಡಿಕೊಂಡು ನಿಂತಿದ್ದಾಗ, ಶಾಂತಕುಮಾರ್ ಮತ್ತು ಅವರ ತಂದೆ ಮನೆಯಿಂದ ಆಚೆ ಬಂದು ನಮ್ಮನ್ನು ನೋಡುತ್ತಾ ನಿಂತಿದ್ದನ್ನು ಆರೋಪಿ ತನ್ನ ಮನೆಯ ಒಳಗೆ ಹೋಗಿ ದೊಣ್ಣೆಯನ್ನು ತಂದು ಚಾಸಾ. 1 ರವರನ್ನು ಕೆಟ್ಟಾ ಮಾತುಗಳಿಂದ ಬೈಯುತ್ತಾ ಕೊಲೆ ಮಾಡುತ್ತೇನೆ ಎಂದು ಕೊಲೆ ಮಾಡಲು ಹೋದಾಗ ಕೈಗಳು ಅಡ್ಡ

ಇಟ್ಟಿದ್ದಾಗ ತಲೆಗೆ ಬೀಳಬೇಕಾದ ಏಟಿನಿಂದ ಕೈಗೆ ಹೊಡೆದು ಮೂಳೆ ಮುರಿದಿತ್ತು ಎಂದರೆ ಸರಿ ಅಲ್ಲ. ನಂತರ ವಿಚಾರ ಮಾಡಿದಾಗ ಚಾಸಾ. 1 ರವರ ಬಳಿ ಆರೋಪಿ 3 ತಿಂಗಳ ಹಿಂದೆ 10 ಸಾವಿರ ಸಾಲ ಪಡೆದು ವಾಪಸ್ಸು ಕೊಡದೇ ಈ ವಿಚಾರದಲ್ಲಿ ಗಲಾಟೆಯಾಯಿತು ಎಂದರೆ ಸರಿ ಅಲ್ಲ. ಸಾಕ್ಷಿ ಹೇಳಿಕೆಯ ಭಾಗವನ್ನು ಓದಿ ತೋರಿಸಿದಾಗ ಸಾಕ್ಷಿ ನಿರಾಕರಿಸಿದ್ದರಿಂದ ಸದರಿ ಹೇಳಿಕೆಯ ಭಾಗವನ್ನು ನಿಶಾನೆ.ಪಿ. 5 ಎಂದು ಗುರುತಿಸಲಾಯಿತು. ಆರೋಪಿ ನನ್ನ ಸಂಬಂಧಿಕರಾಗಿದ್ದರಿಂದ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ.

ಪಾಟೀ ಸವಾಲುಃ ಆರೋಪಿತರ ಪರವಾಗಿ : ಇಲ್ಲ ಎಂದು ಹೇಳಿರುತ್ತಾರೆ.

(ಈ ಸಾಕ್ಷಿದಾರರನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆ ಮಾಡಿದ್ದು ಅದನ್ನು ಯಥಾವತ್ತಾಗಿ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ,

(ಶ್ರೀಮತಿ. ಬಿ.ಎಸ್.ರೇಖಾ )
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.